ಓ.ಎಸ್. 188/2017
ಡಿ.ಡಬ್ಲ್ಯೂ-1

ದಿನಾಂಕಃ **10.09.2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಜಿ.ಬಿ.ಹೆಚ್. ವಕೀಲರಿಂದಃ

2 ನೇ ವಾದಿಯ ತಂದೆಯ ಹೆಸರು ರಾಮಣ್ಣ ತಾತನ ಹೆಸರು ನಂಜಪ್ಪ ಎಂದರೆ ಸರಿ. ನಂಜಪ್ಪನ ಹೆಂಡತಿಯ ಹೆಸರು ಕೆಂಪಕ್ಕ ಎಂದರೆ ಸರಿ. ಸದರಿ ಕೆಂಪಕ್ಕನವರಿಗೆ ಸಿದ್ದಗಂಗಮ್ಮ ಮತ್ತು ಬೋರಮ್ಮ ಎಂಬ ಇಬ್ಬರು ಅಕ್ಕ-ತಂಗಿಯರು. ಕೆಂಪಕ್ಕ, ಸಿದ್ದಗಂಗಮ್ಮ ಮತ್ತು ಬೋರಮ್ಮನವರ ತಾಯಿಯ ಹೆಸರ ಲಕ್ಷ್ಮೀದೇವಮ್ಮ ಎಂದರೆ ಸರಿ. ಲಕ್ಷ್ಮೀದೇವಮ್ಮನ ಗಂಡನ ಹೆಸರು ಹೊಂಬಣ್ಣ ಎಂದರೆ ಸರಿ. ದಾವಾ ಸ್ವತ್ತುಗಳು ಸದರಿ ಲಕ್ಷ್ಮೀದೇವಮ್ಮನವರಿಗೆ ಸೇರಿದ್ದು ಎಂದರೆ ಸರಿ. ದಾವಾ ಸ್ವತ್ತುಗಳು ಕ್ರಯ ಪತ್ರದ ಮೂಲಕ ಲಕ್ಷ್ಮೀದೇವಮ್ಮನವರಿಗೆ ಬಂದಿರುತ್ತವೆ ಎಂದರೆ ಸರಿ. ಲಕ್ಷ್ಮೀದೇವಮ್ಮ ಅವರ ಜೀವಿತ ಕಾಲದಲ್ಲಿ ದಾವಾ ಸ್ವತ್ತುಗಳಲ್ಲಿ ಸ್ವಾಧೀನಾನುಭವದಲ್ಲಿದ್ದರು ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಲಕ್ಷ್ಮೀದೇವಮ್ಮನ ಮಗ ಚನ್ನಪ್ಪ ಸ್ವಾಧೀನದಲ್ಲಿದ್ದರು ಎಂದು ಉತ್ತರಿಸಿರುತ್ತಾರೆ. ಲಕ್ಷ್ಮೀದೇವಮ್ಮನವರನ್ನು ನಾನು ನೋಡಿರುವುದಿಲ್ಲ , ಆದರೆ ನನ್ನ ತಾತ ಚನ್ನಪ್ಪ ಹೇಳುತ್ತಿದ್ದರು.

**2.** ಲಕ್ಷ್ಮೀದೇವಮ್ಮ ದಿಃ09.05.1979 ರಲ್ಲಿ ನೊಂದಾಯಿತ ಮರಣಶಾಸನ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿ ಸಾಕ್ಷಿಯು ಸುಳ್ಳು ಎಂದು ಉತ್ತರಿಸಿರುತ್ತಾರೆ. ಲಕ್ಷ್ಮೀದೇವಮ್ಮ ಸುಮಾರು 20 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು 30 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಲಕ್ಷ್ಮೀದೇವಮ್ಮ ತೀರಿಕೊಳ್ಳುವ

ಸಮಯದಲ್ಲಿ ಚಿನಕವಜ್ರ ಗ್ರಾಮದಲ್ಲಿ ವಾಸವಾಗಿದ್ದರು. ಲಕ್ಷ್ಮೀದೇವಮ್ಮ ತೀರಿಕೊಳ್ಳುವ ಸಮಯದಲ್ಲಿ ಕೆಂಪಕ್ಕನವರೊಂದಿಗೆ ವಾಸವಾಗಿದ್ದರು ಎಂದು ಸೂಚಿಸುವುದು ಸರಿಯಲ್ಲ.

**3.** ಕೆಂಪ್ಪಕ್ಕ ಮತ್ತು ಕೆಂಪಕ್ಕನವರ ಗಂಡ ನಂಜಪ್ಪನವರು ಲಕ್ಷ್ಮೀದೇವಮ್ಮನವರನ್ನು ನೋಡಿಕೊಂಡ ಕಾರಣ ದಿಃ09.05.1979 ರಂದು ಲಕ್ಷ್ಮೀದೇವಮ್ಮ ಕೆಂಪಕ್ಕನವರಿಗೆ ಮರಣಶಾಸನ ಬರೆದುಕೊಟ್ಟಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಲಕ್ಷ್ಮೀದೇವಮ್ಮನವರ ಮರಣಾನಂತರ ಅವರ ಅಂತ್ಯಕ್ರಿಯೆಗಳನ್ನು ಕೆಂಪಕ್ಕ ಮತ್ತು ಕೆಂಪಕ್ಕನವರ ಮಕ್ಕಳು ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಚನ್ನಪ್ಪ ಮತ್ತು ಚನ್ನಪ್ಪನ ಹೆಂಡತಿ ನಾವೇ ಲಕ್ಷ್ಮೀದೇವಮ್ಮನನ್ನು ಸಾಕಿ ಅಂತ್ಯಕ್ರಿಯೆಗಳನ್ನು ಮಾಡಿರುತ್ತೇವೆಂದು ಹೇಳುತ್ತಿದ್ದರು ಎಂದು ಉತ್ತರಿಸಿರುತ್ತಾರೆ.

**4.** 2 ನೇ ವಾದಿಯ ಸೋದರತ್ತೆಯನ್ನು ಚನ್ನಪ್ಪನವರಿಗೆ ಕೊಟ್ಟು ಮದುವೆ ಮಾಡಿದ್ದರು ಎಂದರೆ ಸರಿ. ಚನ್ನಪ್ಪನವರಿಗೆ ಮಕ್ಕಳು ಇರುವುದಿಲ್ಲ ಎಂದರೆ ಸರಿ. ಚನ್ನಪ್ಪನವರಿಗೆ ಪ್ರಾಪಂಚಿಕ ಜ್ಞಾನ ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಚನ್ನಪ್ಪ ಮಾನಸಿಕ ಅಸ್ವಸ್ಥರಾಗಿದ್ದರು ಎಂದು ಸೂಚಿಸುವುದು ಸರಿಯಲ್ಲ. ಚನ್ನಪ್ಪನವರಿಗೆ ಮಾನಸಿಕ ಸ್ಥಿತಿ ಸರಿ ಇಲ್ಲದ ಕಾರಣ ಯಾರೂ ಹೆಣ್ಣು ಕೊಡದ ಕಾರಣ ಸಂಬಂಧದಲ್ಲಿಯೇ ಮದುವೆ ಮಾಡಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಚನ್ನಪ್ಪನ ಮಾನಸಿಕ ಸ್ಥಿತಿ ಸರಿ ಇಲ್ಲದ ಕಾರಣ ಅವರನ್ನು ರಾಮಣ್ಣ ಮತ್ತು ನಂಜಪ್ಪ ನೋಡಿಕೊಳ್ಳುತ್ತಿದ್ದರು ಎಂದು ಸೂಚಿಸುವುದು ಸರಿಯಲ್ಲ.

**5.** ಚನ್ನಪ್ಪನ ಹೆಂಡತಿ ತೀರಿಕೊಂಡು ಹಲವಾರು ವರ್ಷಗಳಾಗಿರುತ್ತವೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು 2016-17 ರಲ್ಲಿ ತೀಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಚನ್ನಪ್ಪನವರ ಹೆಂಡತಿಯ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸಿದ್ದಪ್ಪ ಮತ್ತು ಚನ್ನಪ್ಪ ಅಣ್ಣ-ತಮ್ಮಂದಿರು. ಚನ್ನಪ್ಪನ ಅಣ್ಣನ ಹೆಸರು ಚಿಕ್ಕಣ್ಣ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಸಿದ್ದಪ್ಪನವರನ್ನು ಕರಿಯಣ್ಣ ಎಂದೂ ಸಹ ಕರೆಯುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ಕರಿಯಣ್ಣ ಅವರ ಪಾಲಿನ ಆಸ್ತಿಗಳನ್ನು ತೆಗೆದುಕೊಂಡು ಪ್ರತ್ಯೇಕವಾಗಿ ವಾಸವಾಗಿದ್ದರು ಎಂದು ಸೂಚಿಸುವುದು ಸರಿಯಲ್ಲ. ನಾನು ಕರಿಯಣ್ಣನ ವಾರಸುದಾರ.

**6.** ಕರಿಯಣ್ಣನ ಹೆಸರಿನಲ್ಲಿದ್ದಂತಹ ಆಸ್ತಿಗಳನ್ನು ನನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ಕೆಂಪಕ್ಕನಿಗೆ ಮರಣಶಾಸನ ಆಗಿರುವ ಆಸ್ತಿಗಳನ್ನು ಮಾತ್ರ ಸೇರಿಸಿರುತ್ತಾರೆ ಎಂದರೆ ಸರಿ. ಕೆಂಪಕ್ಕ ಮತ್ತು ನಂಜಪ್ಪ ಅವರ ಜೀವಿತ ಕಾಲದಲ್ಲಿ ದಾವಾ ಸ್ವತ್ತುಗಳ ಸ್ವಾಧೀನಾನುಭವದಲ್ಲಿದ್ದರು ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ಊರಿನಲ್ಲಿಯೇ ಇರಲಿಲ್ಲ ಎಂದು ಉತ್ತರಿಸಿರುತ್ತಾರೆ. ಕೆಂಪಕ್ಕನವರ ಮರಣಾನಂತರ ವಾದಿಗಳು ದಾವಾ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

**7.** ಕೆಂಪಕ್ಕ ಮತ್ತು ನಂಜಪ್ಪ ಕುಣಿಗಲ್ ಹತ್ತಿರ ಬಿಸಿಲಹಳ್ಳಿ ಗ್ರಾಮದಲ್ಲಿ ಇದ್ದರು. ನಂಜಪ್ಪನವರಿಗೆ ಯಾವುದೇ ಆಸ್ತಿ ಇಲ್ಲದ ಕಾರಣ ಕೆಂಪಕ್ಕ ಮತ್ತು ನಂಜಪ್ಪನವರ

ಮದುವೆಯಾದಾಗಿನಿಂದಲೂ ಅವರು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದರು ಎಂದು ಸೂಚಿಸುವುದು ಸರಿಯಲ್ಲ. ಕೆಂಪಕ್ಕ, ಕೆಂಪಮ್ಮ, ರಾಮಣ್ಣ ಮತ್ತು ನಂಜಪ್ಪ ಅವಿದ್ಯಾವಂತರು ಎಂದರೆ ನನಗೆ ಗೊತ್ತಿರುವುದಿಲ್ಲ. ಕೆಂಪಕ್ಕ, ಕೆಂಪಮ್ಮ, ರಾಮಣ್ಣ ಮತ್ತು ನಂಜಪ್ಪನವರು ಅವಿದ್ಯಾವಂತರಾಗಿದ್ದ ಕಾರಣ ದಾವಾ ಸ್ವತ್ತುಗಳ ಖಾತೆಯನ್ನು ಅವರು ವರ್ಗಾವಣೆ ಮಾಡಿಸಿಕೊಂಡಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ.

**8.** ದಾವಾ ಸ್ವತ್ತುಗಳನ್ನು ಲಕ್ಷ್ಮೀದೇವಮ್ಮ ಖರೀದಿ ಮಾಡಿರುವ ಕ್ರಯ ಪತ್ರವನ್ನು ನೋಡಿರುತ್ತೇನೆ. ದಾವಾ ಸ್ವತ್ತುಗಳನ್ನು ಲಕ್ಷ್ಮೀದೇವಮ್ಮ ಖರೀದಿ ಮಾಡಿದ ನಂತರ ಅವರು ಸ್ವಾಧೀನದಲ್ಲಿದ್ದರು. ದಾವಾ 1 ನೇ ಆಸ್ತಿಯ ಪಹಣಿಗಳನ್ನು ನೋಡಿರುತ್ತೇನೆ. ಸದರಿ ಜಮೀನು ಸಿದ್ದೇಗೌಡ ತಂದೆ ಮೇಕೆ ಸಿದ್ದಯ್ಯನವರ ಹೆಸರಿನಲ್ಲಿರುತ್ತದೆ. ಸದರಿ ಸಿದ್ದೇಗೌಡ ತಂದೆ ಮೇಕೆ ಸಿದ್ದಯ್ಯ ಈ ಪ್ರಕರಣದ 3 ನೇ ಪ್ರತಿವಾದಿ ಎಂದರೆ ಸರಿ. ಸದರಿ ಸಿದ್ದೇಗೌಡ ತಂದೆ ಮೇಕೆ ಸಿದ್ದಯ್ಯನವರು ಈ ಪ್ರಕರಣದಲ್ಲಿ ದಾವಾ 1 ನೇ ಸ್ವತ್ತಿನ ಖಾತೆ ತಪ್ಪಾಗಿ ನನ್ನ ಹೆಸರಿಗೆ ಆಗಿರುತ್ತದೆ ಆದರೆ ವಾದಿಗಳು ಸದರಿ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆಂದು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು 3 ನೇ ಪ್ರತಿವಾದಿಯೇ ನಮಗೆ ಕ್ರಯ ಮಾಡಿರುತ್ತಾರೆಂದು ಉತ್ತರಿಸಿರುತ್ತಾರೆ. ನಮಗೆ 2021 ರಲ್ಲಿ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ

**9.** 3 ನೇ ಪ್ರತಿವಾದಿ ನಮಗೆ ಕ್ರಯದ ಮಾತುಕತೆಯನ್ನು ಮಾಡಿ ಮಾರಾಟ ಮಾಡಿರುತ್ತಾರೆ. ಕ್ರಯ ಪತ್ರಕ್ಕೆ ರವಿ ಮತ್ತು ಸಿದ್ದಲಿಂಗೇಗೌಡ ಸಾಕ್ಷಿದಾರರಾಗಿ ಸಹಿಗಳನ್ನು ಮಾಡಿರುತ್ತಾರೆ. ಸದರಿ ಜಮೀನನ್ನು ಎರಡು ಲಕ್ಷ ರೂ.ಗಳಿಗೆ ಖರೀದಿ ಮಾಡಿರುತ್ತೇನೆ.

ದಾವಾ 1 ನೇ ಸ್ವತ್ತಿನ ಮಾರುಕಟ್ಟೆ ಬೆಲೆ ಐವತ್ತು ಲಕ್ಷ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

**(ಈ ಹಂಡತದಲ್ಲಿ ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ